ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 490/2018**

**ಪ್ರಾಸಾ- 13 ಚಾಸಾ- 25**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ವೀಣಾ ಎಸ್ ಎಂ |
| ಗಂಡನ ಹೆಸರುಃ | : | ನಿರಂಜನ್ ಹೆಚ್ ಪಿ |
| ವಯಸ್ಸುಃ | : | 43 ವರ್ಷ |
| ಉದ್ಯೋಗಃ | : | ಪಿಐ |
| ವಾಸ | : | ಹಾಸನ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 04-04-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ದಿನಾಂಕ 4-7-17 ರಿಂದ ಅಕ್ಟೋಬರ್ 2019ರವರೆಗೆ ನಾನು ಹಾಸನ ಎಸಿಬಿ ಕಛೇರಿಯಲ್ಲಿ ಪಿಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕ 6-4-18ರಂದು ನಾನು ಈ ಪ್ರಕರಣದ ಕಡತವನ್ನು ಪಿಐ ಗೋಪಾಲಕೃಷ್ಣರವರಿಂದ ಮುಂದಿನ ತನಿಖೆಗಾಗಿ ಸ್ವೀಕರಿಸಿ ತನಿಖೆ ಮುಂದುವರೆಸಿದೆನು.

3.ದಿನಾಂಕ 8-6-18ರಂದು 1ನೇ ಆರೋಪಿತರ ಅಭಿಯೋಜನಾ ಮಂಜೂರಾತಿ ಪತ್ರವನ್ನು ಸಮುಚಿತ ಮಾರ್ಗದಲ್ಲಿ ಈಗಾಗಲೇ ಗುರುತಿಸಿರುವ ನಿಪಿ-47ರಂತೆ ಸ್ವೀಕರಿಸಿರುತ್ತೇನೆ.

4.ದಿನಾಂಕ 23-6-18ರಂದು 2ನೇ ಆರೋಪಿತರ ಅಭಿಯೋಜನಾ ಮಂಜೂರಾತಿ ಆದೇಶವನ್ನು ಹೊಸೂರು ಗ್ರಾಮ ಪಂಚಾಯಿತಿಯ ಪಿಡಿಒ ರವರಿಂದ ನಿಪಿ-75ರಂತೆ

ಪಡೆದುಕೊಂಡಿರುತ್ತೇನೆ.

5.ದಿನಾಂಕ 30-7-18ರಂದು ನ್ಯಾಯಾಲಯಕ್ಕೆ ದೋ.ಪಟ್ಟಿ ಸಲ್ಲಿಸಿರುತ್ತೇನೆ.

6.ದಿಃ 7-6-19 ರಂದು ಎಫ್ ಎಸ್ ಎಲ್ ನಿಂದ ಬಂದ ಧ್ವನಿಪರೀಕ್ಷಾ ವರದಿಯನ್ನು ನಿಪಿ-49ರಂತೆ ಸ್ವೀಕರಿಸಿರುತ್ತೇನೆ. ದಿನಾಂಕ 13-6-19ರಂದು ಅದನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

**ಪಾಟೀಸವಾಲುಃ 1ನೇ ಆರೋಪಿ ಪರ ವಕೀಲರಿಂದಃ**

ತನಿಖಾ ಕಾಲದಲ್ಲಿ 1ನೇ ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಇಲ್ಲದಿದ್ದರೂ ಸಹ ಸುಳ್ಳು ದೋ.ಪಟ್ಟಿ ಸಲ್ಲಿಸಿರುತ್ತೇನೆ ಎಂದರ ಸರಿಯಲ್ಲ.

(1ನೇ ಆರೋಪಿತರ ಪರ ವಕೀಲರು ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ, ಅನುಮತಿಸಿದೆ.)

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**